ಸಿ. ಸಿ. ನಂ.- **526/22**

ಪಿ.ಡಬ್ಲ್ಯೂ. **1**

ಸಾಕ್ಷಿಯು ದಿನಾಂಕ- **24-12-2025** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲು- ಆರೋಪಿ ಪರ ಶ್ರೀ ಸಿ ಕೆ ಎಂ ವಕೀಲರಿಂದ -

ನನಗೆ 4 ವರ್ಷಗಳಿಂದ ಆರೋಪಿಯ ಪರಿಚಯ ಇದೆ ಎಂದು ನನ್ನ ಸಾಕ್ಷ್ಯದಲ್ಲಿ ಹೇಳಿದ್ದೆ ಆದರೆ ನನಗೆ ಆರೋಪಿಯ ಕುಟುಂಬದ ಸದಸ್ಯರ ಪರಿಚಯ ಇಲ್ಲ. ಆರೋಪಿಗೆ ಸಾಲ ಕೊಡುವಾಗ ಅವರ ಮನೆಯವರಿಗೆ ಆ ಬಗ್ಗೆ ತಿಳಿಸುವ ಪ್ರಯತ್ನ ನಾನು ಮಾಡಲಿಲ್ಲ. ಸಾಕ್ಷಿ ಮುಂದುವರೆದು, ಆದರೆ ಸಾಲ ನೀಡುವ ದಿನ ಆರೋಪಿಯ ಸ್ನೇಹಿತರಾದ ಸುಬ್ರಹ್ಮಣ್ಯರವರು ಸಹ ಇದ್ದರು ಎಂದು ನುಡಿಯುತ್ತಾರೆ. ಸುಬ್ರಹ್ಮಣ್ಯರವರು ನಿಮಗೆ ಹೇಗೆ ಪರಿಚಯ ಎಂದರೆ ಸಾಕ್ಷಿ ನನ್ನ ಸಂಬಂಧಿಕರಾದ ಚಂದ್ರು ಎನ್ನುವವರ ಮುಖಾಂತರ ನನಗೆ ಅವರ ಪರಿಚಯ ಇದೆ ಎಂದು ನುಡಿಯುತ್ತಾರೆ. ಶಾನಭಾಗ ಹೊಟೇಲ್ ನಲ್ಲಿ ಆರೋಪಿಗೆ ಸಾಲ ಕೊಡುವ ದಿನ ಯಾರು ಯಾರು ಇದ್ದರು ಎಂದರೆ ಸಾಕ್ಷಿ ನಾನು, ಆರೋಪಿ ಹಾಗೂ ಸುಬ್ರಹ್ಮಣ್ಯರವರು ಇದ್ದೇವು ಎಂದು ನುಡಿಯುತ್ತಾರೆ. ನಿಮ್ಮ ಪರವಾಗಿ ಯಾರು ಇದ್ದರು ಎಂದರೆ ಸಾಕ್ಷಿ ಸುಬ್ರಹ್ಮಣ್ಯರವರು ನನ್ನ ಹಾಗೂ ಆರೋಪಿಯ ಪರವಾಗಿ ಇದ್ದರು ಎಂದು ನುಡಿಯುತ್ತಾರೆ. ನಾನು ರೂ.10 ಲಕ್ಷ ಸಾಲ ಕೊಡುವ ಮುನ್ನ ತೆರಿಗೆ ಕಟ್ಟಿರುವ ಬಗ್ಗೆ ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು, ಸದರಿ ಮೊತ್ತ ವ್ಯವಸಾಯದಿಂದ ಬಂದ ಹಣ ಎಂದು ನಾನು ಈಗಾಗಲೇ ಬರೆಸಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಬಳಿ ಒಟ್ಟು 17 ಎಕರೆ ವಿಸ್ತೀರ್ಣದ ಭೂಮಿ ಇದೆ. ಸದರಿ ಭೂಮಿಯಲ್ಲಿ ವ್ಯವಸಾಯ ಮಾಡುವುದರಿಂದ ವಾರ್ಷಿಕವಾಗಿ ರೂ.7-8 ಲಕ್ಷ ಆದಾಯ ಬರುತ್ತದೆ. ಈ ಹಿಂದೆ ನನ್ನ ಪಾಟೀ ಸವಾಲಿನಲ್ಲಿ ನೆಲ್ಲು ವ್ಯಾಪಾರದಿಂದ ಬಂದ ಲಾಭದ ಹಣವನ್ನು ನನ್ನ ಚಿಕ್ಕಪ್ಪ ನನ್ನ ಬಳಿ ಕೊಟ್ಟಿದ್ದರು ಆದ್ದರಿಂದ ಈ ಮೇಲೆ ಹೇಳಿದ್ದಷ್ಟು ನಗದು ಹಣ ನನ್ನ ಬಳಿ ಇತ್ತು ಎಂದು ಸಾಕ್ಷ್ಯ ನುಡಿದಿದ್ದೆ ಆದರೆ ಆರೋಪಿಗೆ ರೂ.10 ಲಕ್ಷ ಸಾಲ ಕೊಡುವಾಗ ಆ ಬಗ್ಗೆ ನನ್ನ ಚಿಕ್ಕಪ್ಪರವರಿಗೆ ಮಾಹಿತಿ ತಿಳಿಸಿರಲಿಲ್ಲ. ಸಾಕ್ಷಿ ಮುಂದುವರೆದು, ನಾನು ಆರೋಪಿಗೆ ನೀಡಿದ ರೂ.10 ಲಕ್ಷದ ಸಂಪೂರ್ಣ ಮೊತ್ತವನ್ನು ನನ್ನ ಚಿಕ್ಕಪ್ಪ ನೀಡಿದ ಹಣದಿಂದ ಕೊಟ್ಟಿರಲಿಲ್ಲ, ಆದರೆ ಸ್ವಲ್ಪ ಪ್ರಮಾಣ ಮಾತ್ರ ಇತ್ತು ಎಂದು ನುಡಿಯುತ್ತಾರೆ. ಆರೋಪಿ ಬರೆದುಕೊಟ್ಟ ಪ್ರಾಂಸರಿ ಪತ್ರದಲ್ಲಿ ಸುಬ್ರಹ್ಮಣ್ಯರವರು ಸಾಕ್ಷಿಯಾಗಿ ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ ಹಾಗೂ ಸದರಿ ಪತ್ರಕ್ಕೆ ಅವರೊಬ್ಬರೇ ಸಾಕ್ಷಿದಾರರಾಗಿರುತ್ತಾರೆ.

ಸಿ. ಸಿ. ನಂ.- **526/22**

ಪಿ.ಡಬ್ಲ್ಯೂ. **1**

ಆರೋಪಿಯು ಸದರಿ ಪ್ರಾಂಸರಿ ಪತ್ರವನ್ನು ವಾಪಸ್ಸು ಪಡೆದು, ಚೆಕ್ಕನ್ನು ಕೊಟ್ಟಿದ್ದರು ಎಂದು ನಾನು ಹೇಳಿದ್ದು, ಈ ರೀತಿ ಆರೋಪಿ ಮೊದಲನೇ ವಾರದ ಏಪ್ರೀಲ್, 2022 ರಂದು ಶಾನಭಾಗ ಹೋಟೇಲ್ ನಲ್ಲಿ ನನಗೆ ಚೆಕ್ ಕೊಟ್ಟಿದ್ದರು, ಆ ಸಮಯದಲ್ಲಿ ಸುಬ್ರಹ್ಮಣ್ಯರವರು ಇದ್ದರು.

ನನ್ನ ಆದಾಯ ತೆರಿಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನಾನು ಒಟ್ಟು 3-4 ಬ್ಯಾಂಕ್ ಖಾತೆಗಳನ್ನು ಹೊಂದಿರುತ್ತೇನೆ. ನಾನು ಹಲವಾರು ಚೆಕ್ ಬೌನ್ಸ ಪ್ರಕರಣಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿ ಒಟ್ಟು 3-4 ಚೆಕ್ ಬೌನ್ಸ ಪ್ರಕರಣಗಳನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸುಬ್ರಹ್ಮಣ್ಯರವರನ್ನು ಸಾಕ್ಷಿಯನ್ನಾಗಿ ಮಾಡಲು ನಾನು ಪ್ರಯತ್ನ ಪಡುತ್ತೇನೆ. ಸಾಕ್ಷಿ ಮುಂದುವರೆದು, ಈ ಪ್ರಕರಣ ದಾಖಲಾದ ನಂತರ ನನ್ನ ಹಾಗೂ ಸುಬ್ರಹ್ಮಣ್ಯರವರ ನಡುವೆ ಹೆಚ್ಚಾಗಿ ಸಂಪರ್ಕ ಇಲ್ಲ ಎಂದು ನುಡಿಯುತ್ತಾರೆ. ನನ್ನ ಮತ್ತು ಆರೋಪಿ ನಡುವೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಹಾಗೂ ಸುಬ್ರಹ್ಮಣ್ಯರವರು ಸ್ನೇಹಿತರಾಗಿದ್ದು, ಸದರಿ ಸುಬ್ರಹ್ಮಣ್ಯರವರ ಮಾತು ಕೇಳಿ ನಾನು ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಇನ್ನೂ ಹೆಚ್ಚಿನ ಪಾಟೀಸವಾಲಿಗಾಗಿ ಸಮಯಾವಕಾಶವನ್ನು ಕೇಳಿದ್ದು, ಈ ನ್ಯಾಯಾಲಯವು ಆರೋಪಿ ಪರ ವಕೀಲರು ಕಲಂ.311 ಸಿ ಆರ್ ಪಿ ಸಿ ರಡಿಯಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಅನುಮತಿ ಕೇಳಿ ಸಲ್ಲಿಸಿದ ಅರ್ಜಿಯನ್ನು ಇದೇ ದಿನ ಸಂಪೂರ್ಣ ಪಾಟೀ ಸವಾಲು ಮಾಡಿದರೆ ಮಾತ್ರ ಈ ಅರ್ಜಿ ಪುರಸ್ಕರಿಸಲಾಗುವುದು ಎಂಬ ಷರತ್ತಿನ ಮೇಲೆ ಅದನ್ನು ಪುರಸ್ಕರಿಸಲಾಗಿತ್ತು, ಹೀಗಿದ್ದರೂ ಸಹ ಯಾವುದೇ ಸಕಾರಣಗಳಿಲ್ಲದೇ ಈ ಹಿಂದೆ 2-3 ಬಾರಿ ಇದೇ ರೀತಿ ಅರ್ಜಿಗಳನ್ನು ಸಲ್ಲಿಸಿ, ಪಾಟೀ ಸವಾಲು ಮಾಡದೇ ಇರುವುದರಿಂದ ವಕೀಲರ ಪ್ರಾರ್ಥನೆಯನ್ನು ತಳ್ಳಿಹಾಕಲಾಗಿದೆ ಹಾಗೂ ಮುಂದುವರೆದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಗಿದೆ.)

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಸಹಿ/-

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ವಿಜಯನಗರ ಜಿಲ್ಲೆ, ಹೊಸಪೇಟೆ.